ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿ ಬರುವ ವೈದ್ಯರುಗಳನ್ನು ನೇಮಕ ಮಾಡುವ ಮೂಲಕ ತುಂಬಲಾಗುವುದು. ಗ್ರಾಮಾಂತರ ಪ್ರದೇಶದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಕೆ.ಎಚ್.ಎಸ್.ಡಿ.ಪಿ ಅಡಿಯಲ್ಲಿ 573 ವೈದ್ಯರುಗಳನ್ನು ನೇಮಕ ಮಾಡುವ ಪ್ರಕ್ರಿಯೆ ನಡೆಯುತ್ತಿದ್ದು, ಇದಾದ ನಂತರ ತಪ್ಪದೆ ತುಂಬಲಾಗುವುದು. ಪ್ರಯೋಗ ಶಾಲಾ ತಂತ್ರಜ್ಞರು, ಕ್ಷ-ಕಿರಣ ತಂತ್ರಜ್ಞರು ನೇತ್ರ ಸಹಾಯಕರು ಮತ್ತು ವಾಹನ ಚಾಲಕರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಸಂಬಂಧಿಸಿದ ಜಿಲ್ಲಾಧಿಕಾರಿಗಳ ಮೂಲಕ ತುಂಬಲು ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ಹೆಚ್ಚುವರಿ ನೇಮಕಾತಿ

1041 - ಶ್ರೀ ಶಿವಶಂಕರ ರೆಡ್ಡಿ .ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *1998-99ನೇ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರ ಹೆಚ್ಚುವರಿ ಶೇಖಡ 25 ಪಟ್ಟಿ ಪ್ರಕಟಿಸಿ 4 ತಿಂಗಳಾದರೂ ಆದೇಶ ನೀಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಆ) *ಹೆಚ್ಚುವರಿ ಪಟ್ಟಿಯನ್ನು ಕಳೆದ 5 ವರ್ಷಗಳಿಂದ ಪ್ರಕಟಿಸಿ ಆದೇಶ ಪಟ್ಟಿಯನ್ನು ನೀಡುತ್ತಿರುವುದು ಸರ್ಕಾರಕ್ಕೆ ತಿಳಿದಿಲ್ಲವೇ. ಡಿ.ಪಿ.ಎ.ಆರ್. ಇಲಾಖೆಯವರು ಆದೇಶ ಪತ್ರ ನೀಡಲು ಅನುಮತಿ ನೀಡಿದ್ದಾರೆಯೇ ಇಲ್ಲವೇ?*

ಇ) *ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸಲು ಗ್ರಾಮೀಣ ಕೃಪಾಂಕದ ವಿವಾದ ಕಾರಣವಾಗಿದೆಯೇ?*

ಈ) *ಇನ್ನು ಮುಂದೆ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆಯ ಜೊತೆಗೆ ವಯಸ್ಸನ್ನು ಮಾನದಂಡವನ್ನಾಗಿಸಲು ಸರ್ಕಾರದ ಮುಂದೆ ಯೋಚನೆ ಇದೆಯೇ?*

ಶ್ರೀ ಹಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ. ಜಾರಿಯಲ್ಲಿರುವ ನಿಯಮಗಳ ಅವಕಾಶದನ್ವಯ ಹೆಚ್ಚುವರಿ ಪಟ್ಟಿ ಜಾರಿ ಮಾಡಲು ಎಲ್ಲಾ ಉಪನಿರ್ದೇಶಕರಿಗೆ ಸೂಚಿಸಲಾಗಿದೆ.

ಆ) ತಿಳಿದಿದೆ. ಹಾಲಿ ಜಾರಿಯಲ್ಲಿರುವ ನೇಮಕಾತಿ ನಿಯಮಗಳನ್ವಯ ಹೆಚ್ಚುವರಿ ಪಟ್ಟಿ ಜಾರಿ ಮಾಡಲು ಸಿ.ಎ.ಸು. ಇಲಾಖೆಯು ಅಭಿಪ್ರಾಯ ನೀಡಿರುತ್ತದೆ.

ಇ) ಇಲ್ಲ.

ಈ) ಇರುವುದಿಲ್ಲ.